# ರಾಖಿ ಅವತಾರ

ಇದೀಗ ರಕ್ಷಾ ಬಂಧನವೆಂಬ ಆಧುನಿಕ ಪರ್ವವೊಂದನ್ನು ಸುಖಾಂತವಾಗಿ ಸಂಪನ್ನಗೊಳಿಸಿದ್ದೇವೆ. ಸಾಮಾನ್ಯವಾಗಿ ಉತ್ತರ ಭಾರತದ ಅದರಲ್ಲಿಯೂ ರಜಪೂತ, ಮಾರವಾಡಿ ಸಮುದಾಯಗಳಲ್ಲಿ ವಿಜೃಂಭಣೆಯಿಂದ ಆಚರಿಸುವ ಹಬ್ಬವಿದು. ಈಗೀಗ ಟೀವಿ, ಸಿನಿಮಾ ಮತ್ತು ಆಕರ್ಷಕ ಮಾರುಕಟ್ಟೆಗಳ ಜಾಹೀರಾತುಗಳಿಂದಾಗಿ ಎಲ್ಲೆಡೆ ವೈಭವೋಪೇತವಾಗಿ ಆಚರಿಸಲಾಗುತ್ತಿದೆ. ಅಕ್ಕತಂಗಿಯರೆಲ್ಲಾ ಅಣ್ಣತಮ್ಮಂದಿರುಗಳಿಗೆ ದಾರವೊಂದನ್ನು (ರಾಖಿ) ಕಟ್ಟಿ, ಆರತಿ ಬೆಳಗಿ ತಮ್ಮನ್ನು ಎಲ್ಲ ದುಷ್ಟರಿಂದ ರಕ್ಷಿಸಬೇಕಾಗಿ ವಿನಂತಿಸಿಕೊಳ್ಳುವ ದಿನವಿದು. ಇದರೊಂದಿಗೆ ಅನೇಕ ಪುರಾಣ ಕಥೆಗಳು, ದಂತಕಥೆಗಳು ಹಬ್ಬಿಕೊಂಡಿದ್ದು ಇದೆ. ಯೋಧರು ಯುದ್ಧಗಳಿಗಾಗಿ ರಣಭೂಮಿಗೆ ಹೋಗುವುದಿತ್ತು. ಘೋಷಾ (ಪರದಾ) ಪದ್ಧತಿಯಲ್ಲಿ ಪತ್ನಿಯರನ್ನು ಬಂಧಿಸಿಡುತ್ತಿದ್ದ ಇವರು ತಾವಿಲ್ಲದಿರುವಾಗ ಯಾರಾದರೂ ಪರಪುರುಷರ ಕಣ್ಣು ಮಡದಿಯರ ಮೇಲೆ ಬೀಳಬಾರದು. ಯಾವ ಕಾಲಕ್ಕಾದರೂ ಹೆಣ್ಣು ರಕ್ಷಿಸಬೇಕಾದ ವಸ್ತುವೆಂದೆ ಪರಿಭಾವಿಸಿಕೊಂಡು ಬಂದಿದ್ದರು. ಅದರಲ್ಲಿಯೂ ಹೆಣ್ಣಿನ ಶೀಲದ ಬಗೆಗಂತೂ ತುಂಬಾ ಆಕ್ರಮಣಕಾರಿ ನಿಲುವು ನಮ್ಮ ಸಮಾಜದಲ್ಲಿದೆ. ಪತಿವ್ರತಾ ಧರ್ಮ ಪಾಲನೆಯೊಂದೆ ಹೆಣ್ಣಿಗಿರುವ ಸಾಫಲ್ಯ. ಒಟ್ಟಾರೆ ತಾವಿಲ್ಲದಿರುವಾಗ ಹೆಂಡತಿಯರ ಮಾನ, ಪ್ರಾಣ, ಗೌರವವನ್ನು ಕಾಪಾಡುವ ಹೊಣೆಗಾರಿಕೆ ಅವಳ ಸಹೋದರರ ಮೇಲೆ ಇರಬೇಕೆಂಬ ಒತ್ತಾಯದ ಭಾಗವಾಗಿ ಇದನ್ನು ಆಚರಿಸಿಕೊಂಡು ಬರಲಾಗುತ್ತಿದೆ ಎಂಬೊಂದು ಹೇಳಿಕೆ ಇದೆ. ಅದೇನೆ ಇರಲಿ, ಅಣ್ಣತಮ್ಮಂದಿರಿಗೆ ತಮ್ಮದೇ ಬೆನ್ನ ಬಳಿ ಹುಟ್ಟಿದ ಸಹೋದರಿಯರ ಬಗೆಗೆ ವಾತ್ಸಲ್ಯ, ಆಪ್ತತೆ ಇಲ್ಲದಿಲ್ಲ. ಕೆಲವು ಅಪರೂಪದ ಭ್ರಾತೃತ್ವ ಬಾಂಧವ್ಯಗಳು, ಪರಸ್ಪರರಿಗಾಗಿ ಪ್ರಾಣವನ್ನೆ ಪಣಕ್ಕಿಟ್ಟು ಹೋರಾಡಿದ ಕಥನಗಳು ಇವೆ.

ಇದಕ್ಕೆ ವ್ಯತಿರಿಕ್ತವೆಂಬಂತೆ ಸಹೋದರಿಯರನ್ನೇ ಷತಮ್ಮ ಕಾಮತೃಷೆಗೆ ಬಳಸಿದ ಉದಾಹರಣೆಗಳು ಇಲ್ಲದಿಲ್ಲ. ಮನುಷ್ಯರ ರಾಕ್ಷಸಿತನಕ್ಕೆ ಮನುಷ್ಯರೇ ಸಾಟಿ. ನಕಾರಾತ್ಮಕ ಆಯಾಮವನ್ನು ಪಕ್ಕಕ್ಕಿಟ್ಟು ನೋಡಿದರೆ ಭ್ರಾತೃತ್ವದ ಭಾವನಾತ್ಮಕತೆಯೂ ಆಳವಾಗಿ ಬೇರೂರಿದ ಸಂಸ್ಕೃತಿ ನಮ್ಮದು. ಈ ಹಿನ್ನೆಲೆಯಲ್ಲಿ ಅಣ್ಣತಮ್ಮಂದಿರು ಮನೆಯ ಹೆಣ್ಣುಮಕ್ಕಳನ್ನು ಎಲ್ಲ ಅನಿಷ್ಟಗಳಿಂದಲೂ ರಕ್ಷಿಸುತ್ತಾರೆ. ರಕ್ಷಿಸಬೇಕು ಎಂಬ ಆಶಯ ಇಲ್ಲಿದೆ.

ವಾಸ್ತವದಲ್ಲಿ ಹೆಣ್ಣನ್ನು ಉಪಭೋಗದ ವಸ್ತುವಾಗಿ ಇದಿರುಗೊಂಡ ಮನೋಭಾವದ ಉತ್ಪನ್ನವಾಗಿ ಇಂಥ ಆಚರಣೆಗಳು ಅಸ್ತಿತ್ವಗೊಂಡಿದ್ದು ಇದೆ. ರಾಖಿ ಕಟ್ಟಿಸಿಕೊಂಡವರೆಲ್ಲ ತಮ್ಮ ಸಹೋದರಿಯರನ್ನು ರಕ್ಷಿಸಲು ಮುಂದಾಗಿದ್ದರೆ ಇಂದು ಮಹಿಳೆಯರ ಮೇಲೆ ಅತ್ಯಾಚಾರಗಳು, ವರದಕ್ಷಿಣೆ ಸಾವುಗಳು, ಲೈಂಗಿಕ ಕಿರುಕುಳಗಳು, ಕೌಟುಂಬಿಕ ದೌರ್ಜನ್ಯಗಳು ಈ ಪರಿಯಲ್ಲಿ ಹೆಚ್ಚುತ್ತಿರಲಿಲ್ಲ. ದುರಂತವೆಂದರೆ ಒಂದೆಡೆ ಇಂಥ ಸಾಂಪ್ರದಾಯಿಕ ಭಾವನಾತ್ಮಕ ಸಮಾರಂಭಗಳಲ್ಲಿ ಹೆಚ್ಚಳ ಕಂಡಂತೆ ಮಹಿಳೆಯರ ಮೇಲಿನ ದೌರ್ಜನ್ಯಗಳಲ್ಲಿಯೂ ಹೆಚ್ಚಳವಾಗುತ್ತಿದೆ. ಹೀಗೆಂದು ಕೋಟ್ಯಂತರ ಮುಗ್ಧ ಅಮಾಯಕರ ಆಪ್ತವಾದ ನಾಜೂಕಿನ ಮನುಷ್ಯ ಸಂಬಂಧಗಳನ್ನು ಅಲ್ಲಗಳೆಯಬೇಕಿಲ್ಲ. ಇದಕ್ಕೆ ಉಪಷ್ಟಂಭಕವಾಗಿ ನಡೆದ ಘಟನೆಯೊಂದು ನೋಡಬಹುದು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಶ್ರಾವಣ ಮಾಸವೆಂದರೆ ಎಲ್ಲ ಮಠ–ಮಂದಿರಗಳಲ್ಲಿ ಭಜನೆಯ ಭರಾಟೆ. ಇಲ್ಲೊಂದು ಮಠದಲ್ಲಿ ಮುತ್ಯಾ ಮಡಿವಾಳಪ್ಪನ ಪದಗಳ ಪರಿಷೆ ನೆರೆದಿತ್ತು. ಸುತ್ತಲೂ ಹತ್ತಾರು ಹಳ್ಳಿಯ ಕೂಲಿ ಕಾರ್ಮಿಕ, ರೈತಾಪಿ ಕೆಳಮಧ್ಯಮ ವರ್ಗದ ಜನಜಂಗುಳಿ ಅಲ್ಲಿತ್ತು. ಮಠಾಧಿಪತಿ 30 ವಯೋಮಾನದ ಆಸುಪಾಸಿನ ಯುವಕ ತನ್ನ ಸ್ವಾಮಿತ್ವದ ಗತ್ತು ಗೈರತ್ತಿನಲ್ಲಿ ವಿರಾಜಮಾನನಾಗಿದ್ದಾನೆ. ಸಾಧಕರು 'ಮಗನೊಂದು ಹಡದೆನಲ್ಲ| ಮದುವಿ ಗಂಡ ಮನೆಯೊಳಗಿಲ್ಲ| ಎಂಥದು ಜಗವೇ ತಾಯಿ| ಜಾಣಿ ನಾ ಸುಳ್ಳೇಳೋದಿಲ್ಲ| ಎಂಬ ಮಡಿವಾಳಪ್ಪನ ತಾಯಿ ಬಿದನೂರಿನ ಗಂಗಮ್ಮ ಬರೆದ ಪದವೊಂದು ಹಾಡುತ್ತಿದ್ದಾರೆ. ಹಿನ್ನೆಲ್ಲೆಯಲ್ಲಿ ನೂರಾರು ಸಭಿಕರು ತಮ್ಮ ಅಶಿಷ್ಟ ದೇಸಿ ಕೊರಳಿಂದ ಹಿಮ್ಮೇಳದಲ್ಲಿ ಧ್ವನಿ ನೀಡುತ್ತಿದ್ದಾರೆ. ಸಭೆಯ ಮಧ್ಯದಿಂದ 80 ವಯೋಮಾನ ಆಸುಪಾಸಿನ ಅಜ್ಜಿಯೊಬ್ಬರು ಮೆತ್ತಗೆ ಎದ್ದು ತಡಬಡಾಯಿಸುತ್ತ ಮಠದ ಸ್ವಾಮಿಗಳ ಬಳಿಗೆ ಬಂದು 'ಯಪ್ಪಾ ನಾ ನಿಂಗ್ ರಾಖಿ ಕಟ್ಟಬೇಕು. ಕೈ ತಾ ಈಕಡಿ' ಎನ್ನುತ್ತಾಳೆ. ಸ್ವಾಮಿಯೂ ಅಷ್ಟೇ ಸಖೇದಾಶ್ಚರ್ಯದಿಂದ ಕೈ ಮುಂದ ಮಾಡಿ 'ನಂಗ್ ರಾಖಿ ಕಟ್ತೀ! ಕಟ್ ಬಾರವ್ವಾ ನಿನ್ ಮನಸ್ ಯಾಕ ನೋಸಲಿ. ಕಟ್ ಕಟ್ಟವ್ವ' ಎಂದು ಇಂಬಾಗಿ ನಿಲ್ಲುತ್ತಾರೆ. ಆ ಅಜ್ಜಿ ತನ್ಮಯಳಾಗಿ ಪುಟ್ಟದೊಂದು ಬಣ್ಣದ ರಾಖಿ ನಡುಗುವ ಕೈಗಳಿಂದ ಕಟ್ಟಿ, ಸೆರಗಿನಲ್ಲಿ ಮುಚ್ಚಟೆಯಾಗಿ ತಂದಿದ್ದ ಕುಂಕುಮ ಹಚ್ಚಿ ಅವರ ಪಾದಕ್ಕೆ ಹಣೆ ಹಚ್ಚುತ್ತಲೆ 'ನೀನೇ ಕಾಯೋ ಯಪ್ಪಾ ತಂದೀ! ನನ್ಗ ನಿನ್ ಬಿಟ್ರ ಗತಿಯಿಲ್ಲೆಪ್ಪಾ' ಅಂದವಳೇ ತನ್ನ ಪಾಡಿಗೆ ತಾನು ಹೊರಟೆ ಹೋದಳು. ತುಂಬಾ ಭಾವುಕ ಕ್ಷಣ ಅದಾಗಿತ್ತು. ರಾಖಿಗೂ ಅಜ್ಜಿಗೂ ಮಠದ ಸ್ವಾಮಿಗೂ ಎತ್ತಣಿಂದ ಎತ್ತ ಸಂಬಂಧ?

ಉತ್ತರ ಭಾರತದ ಆಚರಣೆಯೊಂದು ನಮ್ಮ ನಾಡಿಗೆ ಕಾಲಿಟ್ಟದ್ದಲ್ಲದೆ ಅದು ದೇಸೀಕರಣವಾದ ಪರಿ ಬೆರಗು ಮೂಡಿಸದೆ ಇರದು. ಟೀವಿ, ಸಿನಿಮಾಗಳಲ್ಲಿ ಮುನ್ನೆಲೆಗೆ ಬರುವ ಮೊದಲು ರಾಖಿ ಪೂರ್ಣಿಮೆಯ ಈ ರೂಢಿ ನಮ್ಮಲ್ಲಿ ಅಷ್ಟು ಪ್ರಚಲಿತವಿರಲೆ ಇಲ್ಲ. ಗ್ರಾಮೀಣ ಪ್ರದೇಶದಲ್ಲಿಯಂತೂ ಇದರ ವಾಸನೆಯೂ ಇರಲಿಲ್ಲ. ಈಗೀಗ ರಾಖಿ ಪೂರ್ಣಿಮಾ, ಕಡವಾ ಚೌತ್ ಇತ್ಯಾದಿ ಹಬ್ಬಗಳು ನಗರಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿಯೇ ಹೆಚ್ಚು ಅಬ್ಬರದಿಂದ ಆಚರಿಸುತ್ತಾರೆ. ಇದರ ಹಿಂದಿನ ಮಾರುಕಟ್ಟೆಯ ಹುನ್ನಾರುಗಳು ಏನೇ ಇರಲಿ. ಹಣ್ಣು ಹಣ್ಣಾದ ಅಜ್ಜಿಯೊಬ್ಬಳು ಮಠದ ಸನ್ಯಾಸಿಗೆ ಅದು ಹರೆಯದ ತರುಣನಿಗೆ ರಾಖಿ ಕಟ್ಟಿ ತನ್ನನ್ನು ಕಾಪಾಡುವಂತೆ ಕೇಳಿಕೊಳ್ಳುವುದು ಇದೆಯಲ್ಲ ಸೋಜಿಗವೆ ಹೌದು. ಅಳ್ಳಕ ದಾರದ ಮೂಲಕ ತಾನು ನಂಬಿದ ಗುರುವಿನೊಂದಿಗೆ ಆತ್ಮೀಯ ಸಂಬಂಧ ಏರ್ಪಡಿಸಿಕೊಳ್ಳುವ ಮಾಧ್ಯಮವಾಗಿ ಅದು ಅವಳಿಗೆ ಕಂಡಿದ್ದರೆ ಅವಳೊಳಗಿನ ಮುಗ್ಧ ಭಕ್ತಿಯೇ ಕಾರಣವಲ್ಲದೆ ಬೇರೇನೂ ಇಲ್ಲ. ಗುರುವಿನಲ್ಲಿಯೆ ಅಪ್ಪ, ಅವ್ವ, ಅಣ್ಣ ಸರ್ವೆಲ್ಲ ಸಂಬಂಧಗಳನ್ನು ಬೆಸೆದುಕೊಳ್ಳುವ ಅನುಭಾವಿಕ ಮಾರ್ಗದ ಪ್ರಭಾವವೂ, ಆಧುನಿಕ ಆಚರಣಾ ಸಂಪ್ರದಾಯಗಳೊಂದಿಗೂ ಮುಖಾಮುಖಿಯಾದ ಪರಿ ಇದಾಗಿದೆ. ಗುರುವಿಗೆ ರಾಖಿ ಕಟ್ಟಿ ಆತನನ್ನು ಸಹೋದರನನ್ನಾಗಿ ಪರಿಭಾವಿಸುವಲ್ಲಿ ಅವಳು ಅನಿರ್ವಚನೀಯ ಆಪ್ತತೆ ಅನುಭವಿಸಿರಲು ಸಾಕು.

**■ ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ಪ್ರತಿಯೊಂದು ಸಮಸ್ಯೆಗೆ ಉತ್ತರ ಇರುತ್ತದೆ. ಈ ನಂಬಿಕೆ ಇದ್ದಾಗ ಪ್ರತಿಯೊಂದು ಕಷ್ಟವೂ ಪರಿಹಾರವಾಗುತ್ತದೆ.
  —ಆಲೂರು ವೆಂಕಟರಾಯರು
- ಉತ್ತಮವಾದುದು ಶ್ರಮವಿಲ್ಲದೆ ಲಭಿಸದು, ಇಚ್ಛೆಯಿಲ್ಲದಿದ್ದರಂತೂ ಅದು ಸಾಧ್ಯವೇ ಇಲ್ಲ.
  —ಕುವೆಂಪು
- ತಾನು ಆಚರಿಸದೆ ಮತ್ತೊಬ್ಬರು ಮಾತ್ರ ಆಚರಿಸಬೇಕೆಂದು ದ್ವಿವಿಧವಾದುದು ಎಂದೂ ಧರ್ಮವೆನಿಸಿಕೊಳ್ಳುವುದಿಲ್ಲ.
  —ತ.ರಾ. ಸುಬ್ಬರಾವ್
- ಪ್ರಾಣಿ ಜೀವನ ಮಿತವಾದದು, ಮನುಷ್ಯ ಜೀವನ ಬಹುಮುಖವಾದದು.
  —ಶಿವರಾಮ ಕಾರಂತ
- ನಾವು ಹುಟ್ಟಿದ ಸಮಾಜಕ್ಕೆ ಸಲ್ಲಿಸಬೇಕಾದ ಋಣ ಸಮಾಜ ಸೇವೆ.
  —ಟಿ.ಪಿ. ಕೈಲಾಸಂ
- ಗುರಿ ತಪ್ಪಿದರೂ, ಹಾದಿ ತಪ್ಪಬಾರದು.
  —ಎಸ್.ವಿ. ಪರಮೇಶ್ವರ ಭಟ್
- ಸರಳತನವು ಪರಿಪೂರ್ಣತೆಯ ಲಕ್ಷಣ.
  —ಪಂಡಿತ ತಾರಾನಾಥ
- ಕೂರಬೇಡಿ, ನಿಲ್ಲಬೇಡಿ, ಇಳಿಯಬೇಡಿ, ಏರುತ್ತಾ ಇರಿ.
  —ಮಾಸ್ತಿ ವೆಂಕಟೇಶ ಅಯ್ಯಂಗಾರ್